ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 287(614)

ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ತರಬೇತಿ ಹೊಂದಿದ ಸಾವಿರಾರು ಅಧ್ಯಾಪಕರು ಉದ್ಯೋಗಕ್ಕಾಗಿ ಕಾಯುತ್ತಿರುವಾಗ ನಿವೃತ್ತ ಅಧ್ಯಾಪಕರ ನೇಮಕ ಮಾಡಲು ಕಾರಣವೇನು;

ಆ. ನಿವೃತ್ತ ಅಧ್ಯಾಪಕರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡುವಾಗ ನಿರುದ್ಯೋಗಿ ಅಧ್ಯಾಪಕರಿಗೆ ಉದ್ಯೋಗದ ಅವಕಾಶ ತಟ್ಟುತ್ತದೆ ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲವೇ?

ಇ. ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು)

ನಿವೃತ್ತ ಅಧ್ಯಾಪಕರನ್ನು ನೇಮಕ ಮಾಡುತ್ತಿಲ್ಲ

ಉದ್ಭವಿಸುವುದಿಲ್ಲ

ಉದ್ಭವಿಸುವುದಿಲ್ಲ.

ವಿಷಯ : - ನಿಟ್ಟೂರು ಗ್ರಾಮದ ವಡ್ಡರ ಮಾಡು ಹಳ್ಳಿಗಟ್ಟು ಅರಣ್ಯದ ಹರಿಜನ ಗಿರಿಜನರನ್ನು ಒಕ್ಕಲೆಬ್ಬಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 289(302)

ಶ್ರೀಮತಿ ಸುಮಾ ವಸಂತ (ವಿರಾಜಪೇಟೆ)

ಮಾನ್ಯ ಅರಣ್ಯ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿರಾಜಪೇಟೆ ತಾಲ್ಲೂಕು ನಿಟ್ಟೂರು ಗ್ರಾಮದ ವಡ್ಡರ ಮಾಡು "ಹತ್‌ಗಟ್" ಪ್ರದೇಶದ ಹರಿಜನ ಗಿರಿಜನರನ್ನು ಅರಣ್ಯದಿಂದ ಒಕ್ಕಲೆಬ್ಬಿಸುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ)ಈ ಬಗ್ಗೆ ಸಾರ್ವಜನಿಕರಿಂದ ಪ್ರತಿಭಟನೆ ಬಂದಿದೆಯೇ?

ಇ)ಆ ಬಗ್ಗೆ ಸರ್ಕಾರವು ತೆಗೆದಕೊಂಡ ಕ್ರಮಗಳೇನು?

ಶ್ರೀ ಎಂ.ಪಿ.ಕೇಶವಮೂರ್ತಿ

(ಅರಣ್ಯ ರಾಜ್ಯ ಸಚಿವರು)

ಇಲ್ಲ.

ಇಲ್ಲ.

ಉದ್ಭವಿಸುವುದಿಲ್ಲ.

ವಿಷಯ : - ಜಿಲ್ಲಾಗ್ರಂಥಾಲಯಗಳ ಸಮಿತಿಗಳ ನೇಮಕಾತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 290(304)

ಶ್ರೀಮತಿ ಮೋಟಮ್ಮ (ಮೂಡಿಗೆರೆ)

ಮಾನ್ಯ ವಯಸ್ಕರ ಶಿಕ್ಷಣ ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾಗ್ರಂಥಾಲಯ ಸಮಿತಿಗಳ ಅವಧಿ ಮುಗಿದಿದ್ದರೂ ಮರು ನೇಮಕ ಮಾಡದಿರಲು ಕಾರಣವೇನು?

ಆ) ಎಷ್ಟು ದಿನಗಳಲ್ಲಿ ಮರು ನೇಮಕ ಮಾಡಲಾಗುವುದು?

ಶ್ರೀ ಪ್ರಭಾಕರ ಎಸ್.ರಾಣೆ

(ವಯಸ್ಕರ ಶಿಕ್ಷಣ ಸಚಿವರು)

1965ನೇ ಸಾರ್ವಜನಿಕ ಗ್ರಂಥಾಲಯ ಕಾಯಿದೆ ನಿಯಮ 18ರ ಮೇರೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಒಂದು ಪ್ರಾಧಿಕಾರವಿದೆ. ಈ ಪ್ರಾಧಿಕಾರವು ಜಿಲ್ಲೆಯಲ್ಲಿನ ನಾನಾ ಅಧಿಕಾರ ಮತ್ತು ಅಧಿಕಾರೇತರ ಸದಸ್ಯರನ್ನೊಳಗೊಂಡಿರುತ್ತದೆ. ಇದರಲ್ಲಿ ಪದನಿಮಿತ್ತ ಸದಸ್ಯರೂ, ಚುನಾಯಿತ ಪ್ರತಿನಿಧಿಗಳು ಮತ್ತು ನಾಮನಿರ್ದೇಶನಗೊಂಡ ಸದಸ್ಯರೂ ಇರುತ್ತಾರೆ. ಚುನಾಯಿತ ಪ್ರತಿನಿಧಿಗಳು ಹಾಗೂ ನಾಮನಿರ್ದೇಶಿತ ಸದಸ್ಯರ ಅವಧಿ ಮೂರು ವರ್ಷಗಳು. ಕೆಲವು ಆಡಳಿತಾತ್ಮಕ ತೊಂದರೆಯಿಂದಾಗಿ ಸದಸ್ಯರ ಅವಧಿ ಮುಗಿದಿದ್ದರೂ ಹೊಸ ಸದಸ್ಯರ ನೇಮಕ ಮಾಡಲು ವಿಳಂಬವಾಗಿದೆ.

ಈಗಾಗಲೇ ಈ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರ ಇವರಿಂದ ಹೊಸದಾಗಿ ಸದಸ್ಯರ ಹೆಸರುಗಳ ಪಟ್ಟಿಯನ್ನು ಕಳುಹಿಸಲು ಕೋರಿದ್ದು, ಅವುಗಳು ಬಂದ ಕೂಡಲೇ ಮರು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು.

ವಿಷಯ :- ಕೆ.ಜಿ.ಎಫ್‌ನಲ್ಲಿರುವ ಜ್ಯೂನಿಯರ್ ಕಾಲೇಜುಗಳ ಸಂಖ್ಯೆ ಹಾಗೂ ಕೊರತೆ ಇರುವ ಉಪನ್ಯಾಸಕರ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 293(631)

ಶ್ರೀ ಎಂ.ನಾರಾಯಣಸ್ವಾಮಿ(ಬೇತಮಂಗಲ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ)ಕೆ.ಜಿ.ಎಫ್.ನಲ್ಲಿರುವ ಒಟ್ಟು ಜ್ಯೂನಿಯರ್ ಕಾಲೇಜುಗಳ ಸಂಖ್ಯೆ ಎಷ್ಟು? ಹಾಗೂ ಅವುಗಳಲ್ಲಿ ಕೊರತೆ ಇರುವ ಉಪನ್ಯಾಸಕರುಗಳ ಸಂಖ್ಯೆ ಎಷ್ಟು?

(ಆ) ಕೊರತೆ ಇರುವ ಉಪನ್ಯಾಸಕರುಗಳನ್ನು ಸರ್ಕಾರವು ಯಾವಾಗ ಭರ್ತಿ ಮಾಡುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ

(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

(ಆ) ಕೆಜಿಎಫ್‌ನಲ್ಲಿ ಎರಡು ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಹಾಗೂ ಒಂದು ಅನುದಾನಿತ ಸ್ವತಂತ್ರ ಕಾಲೇಜು ಸಹ ಇದೆ.

ಎರಡು ಸರ್ಕಾರಿ ಕಾಲೇಜುಗಳಲ್ಲಿದ್ದ ಉಪನ್ಯಾಸಕರ ಎಲ್ಲಾ ಖಾಲಿ ಹುದ್ದೆಗಳನ್ನು